ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಇವರ ನ್ಯಾಯಾಲಯದಲ್ಲಿ.**
**ಸಿ.ಸಿ. ನಂಬರ್.1128–2014**

.ವಿರುದ್ಧ

ಪಿ.ಡಬ್ಲ್ಯೂ:೬
ಸಿ.ಡಬ್ಲ್ಯೂ:೭

ಹೆಸರು : ರಾಮಕೃಷ್ಣರೆಡ್ಡಿ
ತಂದೆ ಹೆಸರು : ಬೈಯಾರೆಡ್ಡಿ
ವಯಸ್ಸು : ೭೨ ವರ್ಷ
ಉದ್ಯೋಗ : ನಿವೃತ್ತ ಉಪನ್ಯಾಸಕರು
ವಾಸಸ್ಥಳ : ಹೊಸಕೋಟೆ
ದಿ: ೮.೦೯.೨೦೨೨ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದ್ದು, ಸದರಿ ದಾಖಲೆ ಜಪ್ತ ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ.೫ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೫(ಬಿ) ಎಂದು ಗುರುತಿಸಲಾಯಿತು. ಚಾ.ಸಾ.೧ ರವರಿಗೆ ಸೇರಿದ ಚಿನ್ನದ ಸರ ಕಳವು ಆಗಿದ್ದು, ಪೊಲೀಸರು ಕಳ್ಳತನ ಮಾಡಿಕೊಂಡಿರುವ ವ್ಯಕ್ತಿಗಳನ್ನು ಹಿಡಿದಿದ್ದು, ದೂರು ನೀಡಿದವರನ್ನು ಪೊ.ಠಾಣೆಗೆ ಕರೆಸಿದ್ದು, ಆಗ ನಾನು ಸಹ ಪೊ.ಠಾಣೆಗೆ ಹೋಗಿದ್ದು, ದಿ:೯.೦೮.೨೦೧೪ ರಂದು ಪೊಲೀಸರು ಆರೋಪಿತರು ಹೇಳಿದಂತೆ ಮಾಲೂರು ಮುತ್ತುಟ್ ಫೈನಾನ್ಸ್‌ಗೆ ಕರೆದುಕೊಂಡು ಹೋಗಿ ಸ್ಥಳದಲ್ಲಿ ನಿಪಿ.೫ ರಂತೆ ಪಂಚನಾಮೆ ಮಾಡಿದರು. ನನ್ನ ಜೊತೆ ಸುಮಾರು ಐದಾರು ಜನ ಇದ್ದರು. ಪೊಲೀಸರು ಸ್ಥಳದಲ್ಲಿ ಸುಮಾರು ೬ ಚಿನ್ನದ ಸರವನ್ನು ಆರೋಪಿತರ ಕಡೆಯಿಂದ ವಶಪಡಿಸಿಕೊಂಡು ಪಂಚನಾಮೆ ಮಾಡಿದರು.

<u>ಪಾಟೀ ಸವಾಲು</u>: ೨ನೇ ಆರೋಪಿ ಪರವಾಗಿ ಶ್ರೀಮತಿ ಆರ್.ಎಸ್.ಜಿ ವಕೀಲರಿಂದ.

ದಿ: ೯.೦೮.೨೦೧೪ ರಂದು ಯಾವ ವಾರ ಇತ್ತು ಎಂದು ನನಗೆ ನೆನಪಿಲ್ಲ. ಪಂಚನಾಮೆ ಪೂರ್ವದಲ್ಲಿ ಲಿಖಿತ ರೂಪದಲ್ಲಿ ನೋಟಿಸ್ಸು ನೀಡಿರಲಿಲ್ಲ, ಮೌಖಿಕವಾಗಿ ಹೇಳಿದ್ದರು. ನನ್ನ ಜೊತೆಗೆ ಪಂಚನಾಮೆಗೆ ನಾರಾಯಣಸ್ವಾಮಿ, ಎನ್.ರಾಮ್ ರೆಡ್ಡಿ, ಇನ್ನು ಕೆಲವು ಜನ ಬಂದಿದ್ದರು ಅವರ ಹೆಸರು ನೆನಪಿಲ್ಲ. ಪೊಲೀಸರು ನಮ್ಮನ್ನು ವಾಹನದಲ್ಲಿ ಕರೆದುಕೊಂಡು ಹೋದರು, ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಮಾಲೂರು ಮುತ್ತುಟ್ ಫೈನಾನ್ಸ್‌ಗೆ ಹೋದಾಗ ಪೊಲೀಸರು ಪ್ರಕರಣದ ಬಗ್ಗೆ ತಿಳಿಸಿದರು. ಮುತ್ತುಟ್ ಫೈನಾನ್ಸ್ ನಲ್ಲಿ ಆರೋಪಿತರು ಚಿನ್ನದ ಸರಗಳನ್ನು ಅಡ ಇಟ್ಟ ಕುರಿತು ದಾಖಲೆಗಳನ್ನು ನೋಡಿಲ್ಲ. ಪಂಚನಾಮೆ ಸ್ಥಳದ ಚಕ್ಕುಬಂದಿ ಒಂದು ಕಡೆಗೆ ಕೋಲಾರ ರಸ್ತೆ ಇನ್ನುಳಿದ ಕಡೆ ಏನಿತ್ತು ಎಂದು ನನಗೆ ನೆನಪಿಲ್ಲ. ಪಂಚನಾಮೆಯನ್ನು ಪೊಲೀಸರು ಬರೆದುಕೊಂಡರು. ಚಾ.ಸಾ.೧ ನನ್ನ ತಂಗಿ ಎಂದರೆ ಸರಿಯಲ್ಲ. ಈ ದಿನ ನಾನು ಚಾ.ಸಾ.೧ ರವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರು ಈಗ ನಾನು ಚಾ.ಸಾ.೧ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಪ್ತ ಪಡಿಸಿಕೊಂಡಿರುವ ಆಭರಣಗಳನ್ನು ಅವರ ಮಾಲೀಕರಿಗೆ ಪೊಲೀಸರು ಕೊಟ್ಟಿದ್ದಾರೆ.

**<u>ಮರುವಿಚಾರಣೆ</u>**: –ಇಲ್ಲ–

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಇವರ ನ್ಯಾಯಾಲಯದಲ್ಲಿ.**
**ಸಿ.ಸಿ. ನಂಬರ್.1128–2014**

.ವಿರುದ್ದ

ಪಿ.ಡಬ್ಲೂ:೭
ಸಿ.ಡಬ್ಲೂ:೮

ಹೆಸರು : ಚಂದ್ರಶೇಖರರೆಡ್ಡಿ
ತಂದೆ ಹೆಸರು : ಶ್ರೀರಾಮಪ್ಪ
ವಯಸ್ಸು : ३೮ ವರ್ಷ
ಉದ್ಯೋಗ : ಮ್ಯಾನೇಜರ್, ಮುತ್ತುಟ್ ಪೈನಾನ್ಸ
ವಾಸಸ್ಥಳ : ಬೈಕೊತ್ತೂರು, ಶ್ರೀನಿವಾಸಪುರ
ದಿ: ೮.೦೯.೨೦೨೨ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಆರೋಪಿತನ್ನನ್ನು ನೋಡಿದ್ದೇನೆ. ನಾನು ಮುತ್ತುಟ್ ಪೈನಾನ್ಸ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತೇನೆ. ಆರೋಪಿ ದಿ: ೧೧.೦೩.೨೦೧೪ ರಂದು ಒಂದು ಚೈನ್ ಅದರ ತೂಕ ३೮ ಗ್ರಾಂ.೨೦೦ ಮಿ.ಲಿ. ಅನ್ನು ನಮ್ಮ ಪೈನಾನ್ಸನಲ್ಲಿ ಅಡ ಇಟ್ಟಿದ್ದರು. ದಿ: ೯.೦೮.೨೦೧೪ ರಂದು ಹೊಸಕೋಟೆಯ ಪೊಲೀಸರು ಬಂದು ಆರೋಪಿ ಸದರಿ ಚೈನ್ ಅನ್ನು ಆರೋಪಿ ಕಳ್ಳತನ ಮಾಡಿದ್ದು, ಆ ಕುರಿತು ಪ್ರಕರಣ ದಾಖಲಾಗಿರುವುದಾಗಿ ಹೇಳಿದ್ದು, ಆ ದಿನ ಆರೋಪಿತನ್ನನ್ನು ಸ್ಥಳಕ್ಕೆ ಕರೆದುಕೊಂಡು ಬಂದಿದ್ದರು, ಮತ್ತು ಅಲ್ಲಿ ಪಂಚನಾಮೆ ಮಾಡಿದರು. ಸ್ಥಳದಲ್ಲಿ ಪೊಲೀಸರು ಜಪ್ತ ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.೫ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೫(ಸಿ) ಎಂದು ಗುರುತಿಸಲಾಯಿತು. ಈ ಕುರಿತು ಪೊಲೀಸರು ಹೇಳಿಕೆ ಪಡೆದುಕೊಂಡಿದ್ದಾರೆ.

<u>ಪಾಟೀ ಸವಾಲು</u>: ೨ನೇ ಆರೋಪಿ ಪರವಾಗಿ ಶ್ರೀಮತಿ ಆರ್.ಎಸ್.ಜಿ ವಕೀಲರಿಂದ.

ಪಂಚನಾಮೆ ಪೂರ್ವದಲ್ಲಿ ಪೊಲೀಸರು ಎಫ್.ಐ.ಆರ್. ಪ್ರತಿ ಜೊತೆಗೆ ನೋಟಿಸ್ಸು ನೀಡಿದ್ದರು. ನೋಟಿಸ್ಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ಫೈನಾನ್ಸಿಗೆ ೪ ಜನ ಪೊಲೀಸರು ಬಂದಿದ್ದರು. ಪಂಚನಾಮೆಯನ್ನು ಮಧ್ಯಾಹ್ನ ೧ ಗಂಟೆಯಿಂದ ೨ ಗಂಟೆಯವರೆಗೆ ಬರೆದರು. ಸಾಮಾನ್ಯವಾಗಿ ನಾವು ಫೈನಾನ್ಸನಲ್ಲಿ ಅಡ ಇಟ್ಟುಕೊಳ್ಳಬೇಕಾದರೆ ಸಾಕಷ್ಟು ಪ್ರೊಸಿಜೆರ್ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಅನುಸರಿಸಿ ಅಡ ಇಟ್ಟುಕೊಂಡಿದ್ದೇವು ಎಂದು ಹೇಳಿರುತ್ತಾರೆ. ಆ ಕುರಿತು ದಾಖಲೆಗಳನ್ನು ನೀಡಿದ್ದೇನೆ. ಮಹಜರು ಸ್ಥಳದ ಚಕ್ಕುಬಂದಿ ಉತ್ತರಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ಮುಖ್ಯ ರಸ್ತೆ, ಪೂ– ಐಎಫ್ಐ ಫೈನಾನ್ಸ, ಪ– ಎಸ್.ಬಿ.ಐ ಬ್ಯಾಂಕ್ ಇರುತ್ತದೆ. ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳು ೨ನೇ ಆರೋಪಿಗೆ ಸಂಬಂಧ ಪಟ್ಟಿದ್ದು ಎಂದರೆ ಸರಿಯಲ್ಲ. ಪ್ರಕರಣದ ಕುರಿತು ನನಗೆ ಮಾಹಿತಿ ಇಲ್ಲದೇ ಇದ್ದರು ಸಹ ಈಗ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಫೈನಾನ್ಸನಿಂದ ಪಡೆದುಕೊಂಡು ಬಂದ ಚೈನ್ ಈಗ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸಾಕ್ಷಿಯು ಅದನ್ನು ದೂರುದಾರರಿಗೆ ನೀಡಿರುತ್ತಾರೆ ಎಂದು ಹೇಳಿರುತ್ತಾರೆ. ಆ ಕುರಿತು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>:** –ಇಲ್ಲ–

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**